**ದಿನಾಂಕಃ 22/08/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 3 ನೇ ಪ್ರತಿವಾದಿ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

1. ಈ ದಾವೆಯನ್ನು ಸರ್ವೆ ನಂ.378/3, 378/7, 377, 378/5, 190 ರ ಸ್ವತ್ತುಗಳಿಗೆ ಹೂಡಿದ್ದೇವೆ. ಸರ್ವೆ ನಂ.378/5 ರಲ್ಲಿ 10 ಗುಂಟೆ ಇದೆ. 1 ನೇ ಪ್ರತಿವಾದಿ ನನ್ನ ತಂದೆ, 2 ನೇ ಪ್ರತಿವಾದಿ ನನ್ನ ತಾಯಿ. ಸರ್ವೆ ನಂ.378/5 ರ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿದ್ದು, ಅದರ ಆರ್.ಟಿ.ಸಿ ದಾಖಲೆ 3 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ. ಸರ್ವೆ ನಂ.378/5 ರ ಸ್ವತ್ತಿನ ಆರ್.ಟಿ.ಸಿ 3 ನೇ ಪ್ರತಿವಾದಿಯ ಹೆಸರಿನಲ್ಲಿ 2004 ರಿಂದ ಇದೆ.

2. ನಾನು ದ್ವಿತೀಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನನ್ನು ಸಾಕಿ, ಸಲುಹಿ, ವಿದ್ಯಾಭ್ಯಾಸವನ್ನು ನನ್ನ ತಂದೆ ತಾಯಿ ನೀಡಿರುತ್ತಾರೆ. ನನ್ನ ತಂದೆ ತಾಯಿಗೆ ನಾವು 3 ಜನ ಗಂಡು ಮಕ್ಕಳು. ನಮ್ಮ ಪೈಕಿ ನನ್ನ ತಮ್ಮ ಮಣಿಕಂಠ ಮರಣಗೊಂಡಿದ್ದಾನೆ. ಅವರಿಗೆ ವಿವಾಹವಾಗಿರಲಿಲ್ಲ. ನನಗೆ ವಿವಾಹವಾಗಿದೆ. 6 ನೇ ದಾವಾಸ್ವತ್ತಿನಲ್ಲಿ ಈಗ ನಾವು ವಾದಿಗಳು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ವಾಸಿಸುತ್ತಿಲ್ಲ, ಕಾರಣ ಅದು ಈಗ ಬಿದ್ದು ಹೋಗಿದೆ. ಈಗ ನಾವು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಸರ್ವೆ ನಂ.377 ರಲ್ಲಿ 2002 ರಲ್ಲಿ ಬೇರೆ ಬೇರೆ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದೇವೆ. ಅದರಲ್ಲಿ ಒಟ್ಟು 3 ಮನೆಗಳು ಇವೆ. ಈ ದಾವೆ ಹೂಡುವಾಗ ಸದರಿ 3 ಮನೆಗಳ ಬಗ್ಗೆ ಮತ್ತು ಬೇರೆ ಬೇರೆ ವಾಸ ಮಾಡುತ್ತಿರುವ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿಲ್ಲ. ಒಂದು ಮನೆಯಲ್ಲಿ ನನ್ನ ತಂದೆ ತಾಯಿ, ಇನ್ನೊಂದು ಮನೆಯಲ್ಲಿ ನಾನು ನನ್ನ ಹೆಂಡತಿ ಮಕ್ಕಳು ಹಾಗೂ ಮತ್ತೊಂದು ಮನೆಯಲ್ಲಿ 1 ನೇ ವಾದಿ ಮತ್ತು ಅವರ ಹೆಂಡತಿ ಮಕ್ಕಳು ವಾಸಿಸುತ್ತಿದ್ದಾರೆ.

3. ದಾವಾ ಐಟಂ ನಂ.3 ರಲ್ಲಿ ಮತ್ತು ಮನೆಗಳಲ್ಲಿ ನಮಗೂ ಮತ್ತು 1 ಮತ್ತು 2 ನೇ ಪ್ರತಿವಾದಿಗಳಿಗೂ ಹಿಸ್ಸಾ ಹಕ್ಕಿದೆ. ದಾವಾ ಐಟಂ ನಂ.3 ರಲ್ಲಿರುವ 3 ಮನೆಗಳನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು 1

ಮತ್ತು 2 ನೇ ಪ್ರತಿವಾದಿಗಳು ಶುಭಾ ಸಮಾರಂಭಗಳನ್ನು ಒಟ್ಟಿಗೆ ಆಚರಿಸುತ್ತಿಲ್ಲ. 1 ನೇ ವಾದಿಗೆ 30 ವರ್ಷಗಳ ಹಿಂದೆ ನನ್ನ ತಂದೆ ತಾಯಿ ಮದುವೆ ಮಾಡಿದ್ದಾರೆ. ನನ್ನ ಮದುವೆಯಾಗಿ 10 ವರ್ಷವಾಗಿದೆ. ನನ್ನ ಲಗ್ನಪತ್ರಿಕೆಯಲ್ಲಿ ನನ್ನ ತಂದೆ ತಾಯಿಯ ಹೆಸರನ್ನು ಸೇರಿಸಿದ್ದೇನೆ. ಆದರೆ ಅವರು ನನ್ನ ಮದುವೆಗೆ ಬಂದಿರಲಿಲ್ಲ. ನನ್ನ ಮದುವೆ ಪ್ರೀತಿಸಿ, ಸಾಂಪ್ರದಾಯಿಕವಾಗಿ ಮಾಡಿದಂತಹ ಮದುವೆ. ನನ್ನ ತಂದೆ ತಾಯಿ ನನ್ನ ಹೆಂಡತಿಯನ್ನು ಸೊಸೆಯಾಗಿ ಒಪ್ಪಿಕೊಂಡಿಲ್ಲ. ನನ್ನ ತಂದೆ ತಾಯಿ ಮತ್ತು ನನ್ನ ಹೆಂಡತಿ ನನ್ನ ಮದುವೆಯಾದಾಗಿನಿಂದಲೂ ಮಾತನಾಡುತ್ತಿಲ್ಲ. ನನ್ನ ಮದುವೆಯೇ ನಾವು ಮತ್ತು ನನ್ನ ತಂದೆ ತಾಯಿ ಮಾತನಾಡದೇ ಇರುವುದಕ್ಕೆ ಕಾರಣವಾಗಿದೆ. ನನ್ನ ಮದುವೆ ಮುಂಚೆ ನಾನು ನನ್ನ ಅಣ್ಣ ಅನ್ಯೋನ್ಯವಾಗಿದ್ದೆವು. ಆದರೆ ನನ್ನ ತಂದೆ ತಾಯಿಯೊಂದಿಗೆ ಸ್ವಲ್ಪ ಅನ್ಯೋನ್ಯವಾಗಿದ್ದೆವು.

4. ನಮ್ಮ ಕುಟುಂಬದ ಯಜಮಾನಿಕೆಯನ್ನು ನನ್ನ ತಾಯಿ ಮಾಡುತ್ತಿದ್ದರು. ಆದರೆ ತಂದೆ ಮಾಡುತ್ತಿರಲಿಲ್ಲ. ನನ್ನ ತಂದೆ ವ್ಯವಸಾಯ ಮಾತ್ರ ಮಾಡುತ್ತಿದ್ದರು. ವ್ಯವಸಾಯದಿಂದ ಬಂದ ಆದಾಯವನ್ನು ನನ್ನ ತಂದೆ ನನ್ನ ತಾಯಿಗೆ ನೀಡುತ್ತಿದ್ದರು. ನನ್ನ ತಂದೆ ನನ್ನ ತಾಯಿಗೆ ಆದಾಯವನ್ನು ನೀಡುತ್ತಿದ್ದ ಬಗ್ಗೆ ದಾಖಲೆ ಇದೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

5. ದಾವಾ ಐಟಂ ನಂ.4 ಪಿತ್ರಾರ್ಜಿತ ಎಂದು ತೋರಿಸಲು ದಾಖಲೆ ಇದೆ. ಸರ್ವೆ ನಂ.378/5 ರ ಜಮೀನು ಮೂಲತಃ ತಿಮ್ಮ ಬಿನ್ ಗೆಂಡೆಚೊತ್ತ ರವರಿಗೆ ಸೇರಿದ್ದು. ತಿಮ್ಮ ರವರ ತಾತ ಮತ್ತು ಅಜ್ಜಿಯ ಹೆಸರು ಗೊತ್ತಿಲ್ಲ. ತಿಮ್ಮನ ತಾತನಿಗೆ 4 ಜನ ಗಂಡು ಮಕ್ಕಳು. ಅವರ ಹೆಸರು ಪುಟ್ಟೇಗೌಡ, ತಿಮ್ಮೇಗೌಡ, ಲಕ್ಕೇಗೌಡ ಮತ್ತು ನಿಂಗೇಗೌಡ. ದಾವಾ ಐಟಂ ನಂ.4 ರ ಜಮೀನಿನ ಮೇಲೆ ಆ ನಾಲ್ಕು ಜನಕ್ಕೂ ಹಕ್ಕಿತ್ತಾ ಎಂದರೆ ಸಾಕ್ಷಿಯು ತಿಮ್ಮೇಗೌಡ ರವರಿಗೆ ಮಾತ್ರ ಇತ್ತು ಎಂದು ನುಡಿಯುತ್ತಾರೆ. ಆ ರೀತಿ ತೋರಿಸಲು ವಿಭಾಗ ಪತ್ರ ಇದೆಯೋ, ಇಲ್ಲವೋ ಗೊತ್ತಿಲ್ಲ.

6. 1 ನೇ ಪ್ರತಿವಾದಿ ಇದೇ ನ್ಯಾಯಾಲಯದಲ್ಲಿ 3 ನೇ ಪ್ರತಿವಾದಿಯ ವಿರುದ್ಧ ತಾನೇ ದಾವಾಸ್ವತ್ತಿನ ಐಟಂ ನಂ.4 ರ ಮಾಲೀಕ ಮತ್ತು ಸ್ವಾಧೀನಾನುವದಲ್ಲಿದ್ದೇನೆಂದು ಘೋಷಿಸಲು ಅಸಲು ದಾವಾ ಸಂಃ88/2010 ನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಪಿ.ಯು.ಸಿ ಓದುತ್ತಿದ್ದೆ. ಆ ದಾವೆಯಲ್ಲಿ ನನ್ನ ತಂದೆ ಬಿ.ಜಿ.ಸತೀಶ್ ಎಂಬ ವಕೀಲರನ್ನು ನೇಮಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ರಮೇಶ್ ಕುಮಾರ್ ಎಂಬ ವಕೀಲರನ್ನು ನೇಮಿಸಿ ದಾವೆ ನಡೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ದಾವಾ ಐಟಂ ನಂ.4 ರ ಮಾಲೀಕರೂ ಅಲ್ಲ, ಸ್ವಾಧೀನಾನುಭವದಲ್ಲೂ ಇಲ್ಲ ಎಂದು ತೀರ್ಪಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ ನನ್ನ ತಂದೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್.ಎ.21/2016 ರ ಅಪೀಲನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲು ಸಹ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ 3 ನೇ ಪ್ರತಿವಾದಿ ಏನು ಲಿಖಿತ ಹೇಳಿಕೆ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ.

7. 3 ನೇ ಪ್ರತಿವಾದಿ ನನ್ನ ತಂದೆಯ ವಿರುದ್ಧ ದಾವಾ ಐಟಂ ನಂ.4 ರ ಸ್ವತ್ತಿನ ಬಗ್ಗೆ ಒ.ಎಸ್.74/1999 ರ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನನ್ನ ತಂದೆಯಾಗಲೀ, ಅವರ ಬೆಂಬಲಿಗರಾಗಲೀ 3 ನೇ ಪ್ರತಿವಾದಿಗೆ ಶಾಶ್ವತವಾಗಿ ತೊಂದರೆ ನೀಡಬಾರದು ಎಂದು ಶಾಶ್ವತ ಪ್ರತಿಬಂಧಕಾಜ್ಞೆ ತೀರ್ಪು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1999 ರಲ್ಲಿ ನಾನು 5-6 ನೇ ತರಗತಿ ಓದುತ್ತಿರಬಹುದು. ನನ್ನ ತಂದೆ ಹೇಗಾದರೂ ಮಾಡಿ ದಾವಾ ಐಟಂ ನಂ.4 ರ ಸ್ವತ್ತನ್ನು ಕಬಳಿಸಲು ವಿಫಲವಾದ್ದರಿಂದ ನನ್ನನ್ನು ಮತ್ತು ನನ್ನ ಅಣ್ಣನನ್ನು ಎತ್ತಿಕಟ್ಟಿ ಈ ಸುಳ್ಳು ದಾವೆಯನ್ನು ಹೂಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ರ ಸ್ವತ್ತು 3 ನೇ ಪ್ರತಿವಾದಿಯ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿದೆ ಎಂದರೆ ಸರಿಯಲ್ಲ.

8. ನನ್ನ ವಾದಪತ್ರದಲ್ಲಿ ಏನೇನು ಒಕ್ಕಣೆಗಳನ್ನು ಬರೆಯಲಾಗಿದೆ ಎಂದು ಗೊತ್ತು. ದಾವಾಸ್ವತ್ತುಗಳೆಲ್ಲದರಲ್ಲೂ ನನ್ನ ತಂದೆ ತಾಯಿ ಸ್ವಾಧೀನದಲ್ಲಿದ್ದಾರೆ. ಆದರೆ ಸರ್ವೆ ನಂ.376/4 ರಲ್ಲಿ ಎಲ್ಲರೂ ಸ್ವಾಧೀನದಲ್ಲಿದ್ದೇವೆ. 2015-16 ರಲ್ಲಿ ಭಾಗ

ಮಾಡಬೇಕೆಂದು ಕೇಳಿದೆವು. ನನ್ನ ಅಣ್ಣ–1 ನೇ ವಾದಿ ಭಾಗ ಕೇಳುವ ಮುನ್ನಾ ನನ್ನ ತಂದೆ ತಾಯಿಯೊಂದಿಗೆ ಅನ್ಯೋನ್ಯವಾಗಿದ್ದರು. ಭಾಗ ಕೇಳಿದ ತಾರೀಖು, ತಿಂಗಳು ಗೊತ್ತಿಲ್ಲ. ಭಾಗಾಂಶ ಮಾಡಲು ಪಂಚಾಯತಿ ಸೇರಿಸಿರಲಿಲ್ಲ. ದಾವೆ ಹೂಡುವ ಕಾಲಕ್ಕೆ ಮಾಹಿತಿ ನೀಡಲು ನನ್ನ ಅಣ್ಣನೂ ಬಂದಿದ್ದರು. ನನ್ನ ಅಣ್ಣ ನನ್ನ ತಂದೆ ಹೂಡಿದ ದಾವೆ, ಅಪೀಲು ಹಾಗೂ ನನ್ನ ತಂದೆಯ ವಿರುದ್ಧ ಹೂಡಿದಂತಹ ದಾವೆಯ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿರಲಿಲ್ಲ. ನನ್ನ ತಂದೆ ತಾಯಿ ತಾವು ಜೀವಂತ ಇರುವವರೆಗೂ ಸ್ವತ್ತುಗಳಲ್ಲಿ ಭಾಗ ನೀಡುವುದಿಲ್ಲವೆಂದು ತಿಳಿಸಿದ್ದರು.

9. 4 ನೇ ಐಟಂ ಸ್ವತ್ತು ನಮ್ಮ ಕುಟುಂಬದ ಸ್ವತ್ತು ಎಂದು ನನ್ನ ತಂದೆ ತಾಯಿ ಮಾಹಿತಿ ನೀಡಲಿಲ್ಲ, ಆದರೆ ದಾಖಲೆಗಳನ್ನು ಪರಿಶೀಲಿಸಿದ್ದೆವು. ನನ್ನ ಮತ್ತು ನನ್ನ ಅಣ್ಣ ಹುಟ್ಟುವ ಮುನ್ನಾ ಆದಂತಹ ಘಟನೆಗಳ ಬಗ್ಗೆ ಮಾಹಿತಿ ಇಲ್ಲ. ನಮ್ಮ ಕುಟುಂಬಕ್ಕೂ ತಿಮ್ಮ ಬಿನ್ ಗೆಂಡೆ ಚೊತ್ತ ರವರ ಕುಟುಂಬಕ್ಕೂ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದನ್ನು ತೋರಿಸುವ ವಂಶವೃಕ್ಷ ಇದೆ. ನಮ್ಮ ವಂಶವೃಕ್ಷದ ಬಗ್ಗೆ ಆರ್.ಡಿ ವಂಶವೃಕ್ಷ ಇದೆ. 4 ನೇ ಐಟಂ ಸ್ವತ್ತನ್ನು ಕಬಳಿಸಲು ತಿಮ್ಮ ಬಿನ್ ಗೆಂಡೆ ಚೊತ್ತ ರವರೊಂದಿಗೆ ಸುಳ್ಳು ಸಂಬಂಧ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ 4 ನೇ ಐಟಂ ಸ್ವತ್ತಿನ ಮೇಲೆ ಯಾವುದೇ ಹಿಸ್ಸಾ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**